ಪ್ರಜಾವಾಣಿ

## ಬ್ಯಾಸ್ಕೆಟ್‌ಬಾಲ್: ಜೈನ್ ವಿ.ವಿಗೆ ಜಯ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ತಂಡ ಚೆನ್ನೈನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿ.ವಿ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಗೆಲುವು ದಾಖಲಿಸಿದೆ.

ಇಲ್ಲಿನ ಸತ್ಯಾಂಬ ವಿಶ್ವವಿದ್ಯಾಲಯದಲ್ಲಿ ನಡೆದ ಟೂರ್ನಿಯಲ್ಲಿ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ 99–97ರಲ್ಲಿ ಚಂಡೀಗಡದ ಪಂಜಾಬ್ ವಿ.ವಿ ತಂಡವನ್ನು ಮಣಿಸಿತು.

ವಿಸು ಪಳನಿ 23 ಹಾಗೂ ಕೈಫ್ ಜಿಯಾ 24 ಪಾಯಿಂಟ್ಸ್ ಪಡೆದು ಉತ್ತಮ ಪ್ರದರ್ಶನ ಮುಂದುವರಿಸಿದ್ದಾರೆ.